**ಸಹಕಾರ ಚುನಾವಣಾ ಪ್ರಾಧಿಕಾರ,ಟಿ.ಟಿ.ಎಂ.ಸಿ.ಕಟ್ಟಡ, 3ನೇಮಹಡಿ, ಶಾಂತಿನಗರ, ಬೆಂಗಳೂರು-560027.**

**ಸಂಖ್ಯೆ : ಸಚುಪ್ರಾ/ಆಡಳಿತ/63/2018** **ದಿನಾಂಕ 05.02.2019**

**ಚುನಾವಣೆ ತುರ್ತು**

ವಿಷಯ : ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ.

ಉಲ್ಲೇಖ :
1) ಗೌ॥ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾಖಲಿಸಲಾದ ರಿಟ್ ಅರ್ಜಿ ಸಂಖ್ಯೆ: 57154-57155/2018 (CS-EL/M), W.P.NO. 56996-57125/2018(CS-EL/M),W.P.NO.56581-56582/ 2018(CS-EL/M) AND W.P.NO.56682/2018(CS-EL/M) ರಲ್ಲಿ ನೀಡಿರುವ ಆದೇಶ 26.12.2018.
2) ಈ ಕಛೇರಿಯ ಪತ್ರ ಸಂಖ್ಯೆ : ಸಚುಪ್ರಾ/ಆಡಳಿತ/63/2018 ದಿನಾಂಕ 03.01.2019.
3) ವಿಡಿಯೋ ಕಾನ್‌ಫೆರೆನ್ಸ್ ಮೂಲಕ ಗೌ॥ ಉಚ್ಚ ನ್ಯಾಯಾಲಯವು ತನ್ನ ಆದೇಶ IA-2/2019ರಲ್ಲಿ ನೀಡಿರುವ ಆದೇಶ ದಿನಾಂಕ 18.01.2019.
4) ಈ ಕಛೇರಿಯ ಪತ್ರ ಸಂಖ್ಯೆ : ಸಚುಪ್ರಾ/ಆಡಳಿತ/63/2018 ದಿನಾಂಕ 19.01.2019.
5) ಗೌ॥ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾಖಲಿಸಲಾದ ರಿಟ್ ಅಪೀಲು ಸಂಖ್ಯೆ : 185/2019 C/W 301-303/2019 ರಲ್ಲಿ ನೀಡಿರುವ ಮಧ್ಯಂತರ ತಡೆಯಾಜ್ಞೆ ದಿನಾಂಕ 04.02.2019.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(5)ರಲ್ಲಿ ಗೌ॥ ಉಚ್ಚ ನ್ಯಾಯಾಲಯವು ತನ್ನ ಆದೇಶ ದಿನಾಂಕ 04.02.2019ರಂತೆ ಉಲ್ಲೇಖ(3)ರ ಮಧ್ಯಂತರ ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುವ ಹಿನ್ನಲೆಯಲ್ಲಿ ಈ ಕಛೇರಿಯ ಉಲ್ಲೇಖ(4)ರ ಸ್ಪಷ್ಟೀಕರಣವನ್ನು ಹಿಂಪಡೆಯಲಾಗಿದೆ. ಆದ್ದರಿಂದ, ಉಲ್ಲೇಖ(1)ರ ಗೌ॥ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ, ಈ ಹಿಂದೆ ಈ ಕಛೇರಿಯಿಂದ ಉಲ್ಲೇಖ(2)ರಲ್ಲಿ ನೀಡಿರುವ ಸ್ಪಷ್ಟೀಕರಣದನ್ವಯ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದೆ.

(ಡಾ: ಎನ್.ಎಸ್. ಚನ್ನಪ್ಪಗೌಡ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು-27.

[illegible]

ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ:ಸಚುಪ್ರಾ/ಆಡಳಿತ/63/2018

3 ನೇ ಮಹಡಿ, ಬಿ.ಎಂ.ಟಿ.ಸಿ. 'ಬಿ' ಬ್ಲಾಕ್,
ಶಾಂತಿನಗರ, ಬೆಂಗಳೂರು-560 027
ದಿನಾಂಕ: 03-01-2019

<u>ಚುನಾವಣೆ ತುರ್ತು</u>

ವಿಷಯ : ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ

ಉಲ್ಲೇಖ : 1) ಗೌರವ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಲಾದ ರಿಟ್ ಅರ್ಜಿ ಸಂ: 57154-57155/2018, (CS-EL /M ) Writ Petition No. 56996-57125/2018 (CS-EL/M) W.P. No.56581-56582//2018, (CS-EL /M ) and W.P.No.56682//2018, (CS-EL /M )- dated:26-12-2018 ಕ್ಕೆ ಸಂಬಂಧಿಸಿದ ಮಧ್ಯಂತರ ಆದೇಶ ದಿನಾಂಕ:26-12-2018

2) ಶ್ರೀ ಕೇಶವರೆಡ್ಡಿ, ಸಹಕಾರ ಚುನಾವಣಾ ಪ್ರಾಧಿಕಾರದ ಕಾನೂನು ಸಲಹೆಗಾರರು ರವರಿಂದ ದಿನಾಂಕ:30-12-2018ರಂದು ಪಡೆದ ಕಾನೂನು ಅಭಿಪ್ರಾಯ

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗೌರವ ಉಚ್ಚ ನ್ಯಾಯಾಲಯವು ಮಧ್ಯಂತರ ಆದೇಶವನ್ನು ಈ ಕೆಳಕಂಡಂತೆ ನೀಡಿರುತ್ತದೆ.

" ...................... Hence, the following interim order;

**The respondents/The State Co-operative Election Authority, Joint Registrar of Co-operative Societies and Election Officer and Joint Registrar of Co-operative Societies shall hold elections to the societies which are completing their term of office and in respect of which elections are being held for the first time after coming into effect of the amended provision and in respect of such societies, the respondent – State shall ensure that the voters who are otherwise entitled to cast their votes shall be permitted to cast their votes without reference to Clause (a-iv) (a-v) of Section 20 of the said Act. It is made clear that those voters who have attracted the disqualification under Clause (a-iv) (a-v) of Section 20 of the said Act, shall not be permitted to contest in the elections."**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ತಿದ್ದುಪಡಿ ಕಾಯ್ದೆ 3, 2013 ರಂತೆ ಕಲಂ 20ರ ತಿದ್ದುಪಡಿ ಆಗಿದ್ದು, ಆ ತಿದ್ದುಪಡಿಯು ದಿನಾಂಕ:11-02-2013ರಿಂದ ಜಾರಿಗೆ ಬಂದಿರುತ್ತದೆ. ಗೌರವ ಉಚ್ಚ ನ್ಯಾಯಾಲಯದ

2

ಆದೇಶದಂತೆ ದಿನಾಂಕ:11-02-2013ರ ನಂತರ ಯಾವ ಯಾವ ಸಹಕಾರ ಸಂಘಗಳಿಗೆ ಪ್ರಥಮ ಬಾರಿಗೆ ಚುನಾವಣೆ ನಡೆಯುತ್ತಿದೆಯೋ ಅಂತಹ ಸಹಕಾರ ಸಂಘಗಳಿಗೆ ಮತದಾರರ ಪಟ್ಟಿ ತಯಾರು ಮಾಡುವಾಗ ಮಾನ್ಯ ಗೌರವ ಉಚ್ಚ ನ್ಯಾಯಾಲಯದ ಆದೇಶದಂತೆ ಕ್ರಮವಿಡತಕ್ಕದ್ದು.

ದಿನಾಂಕ:11–02–2013ರ ನಂತರ ಯಾವ ಯಾವ ಸಹಕಾರ ಸಂಘಗಳಿಗೆ ಈಗಾಗಲೇ ಒಂದು ಚುನಾವಣೆ ನಡೆದು, ಅವಧಿ ಮುಗಿದು ಎರಡನೇ ಬಾರಿಗೆ ಚುನಾವಣೆ ನಡೆಯುತ್ತಿದೆಯೋ (ಅಂದರೆ ದಿನಾಂಕ:11–2–2013 ರ ನಂತರ ಒಂದು ಚುನಾವಣೆ ನಡೆದು, ಆ ಸಹಕಾರ ಸಂಘಗಳ ಪದಾವಧಿ ಮುಗಿದು, ಪುನಃ ಚುನಾವಣೆ ನಡೆಯುತ್ತಿದ್ದಲ್ಲಿ) ಅಂತಹ ಸಹಕಾರ ಸಂಘಗಳ ಮತದಾರರ ಪಟ್ಟಿ ತಯಾರಿಸುವಾಗ ತಿದ್ದುಪಡಿ ಕಾಯ್ದೆ 3 – 2013 ರ ಕಲಂ 20 (a-iv) and (a-v) ರನ್ವಯ ಕ್ರಮ ತೆಗೆದುಕೊಳ್ಳಲು ತಿಳಿಸಿದೆ.

(ಡಾ. ಕೆ.ಸಿ. ಯತೀಶ್ ಕುಮಾರ್)
ಕಾರ್ಯದರ್ಶಿ,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

1) ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ,
ಬೆಂಗಳೂರು

2) ಎಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾ ಉಪನಿಬಂಧಕರು/
ಪ್ರಾಂತೀಯ ಜಂಟಿ ನಿಬಂಧಕರು/ಅಪರ ನಿಬಂಧಕರು, (ಬಳಕೆ ಮತ್ತು ಮಾರಾಟ)/
ಅಪರ ನಿಬಂಧಕರು (ಗೃಹ ಮತ್ತು ಇತರೆ)
ಜಂಟಿ ನಿಬಂಧಕರು, ಕಾನೂನು ಕೋಶ, ಪಟ್ಟಣ ಬ್ಯಾಂಕುಗಳ ವಿಭಾಗ,
ಕೇಂದ್ರ ಕಛೇರಿ, ಬೆಂಗಳೂರು